## ಇಲ್ಲಿಯವರೆಗೆ

ಸುಗಂಧ ಸಾರೋಟನ್ನು ಹತ್ತಬೇಕು ಎನ್ನುವಾಗ ಒಬ್ಬ ತರುಣ ಓಡುತ್ತಾ ಬಂದು ಎರಡು ನಿಮಿಷ ಮಾತನಾಡಬೇಕು ಎನ್ನುತ್ತಾನೆ. ಆಗಂತುಕರೊಂದಿಗೆ ಮಾತನಾಡುವ ಅಭ್ಯಾಸ ನನಗಿಲ್ಲ ಎಂದು ಸುಗಂಧ ಹೇಳಿದಾಗ 'ನಾನೊಬ್ಬ ಚಿತ್ರಕಲಾವಿದ, ನಿಮ್ಮನ್ನು ಯಾವ ಕೆಟ್ಟದೃಷ್ಟಿಯಿಂದಲೂ ನೋಡಲಿಲ್ಲ' ಎಂದು ಹೇಳಿ ತೈಲಚಿತ್ರವೊಂದನ್ನು ಕೊಡುತ್ತಾನೆ. ಜೊತೆಗೆ ನಿಮ್ಮ ಅನುಮತಿ ಇಲ್ಲದೆ ಚಿತ್ರಬಿಡಿಸಿದ್ದಕ್ಕಾಗಿ ಕ್ಷಮೆ ಇರಲಿ ಎಂದೂ ಹೇಳುತ್ತಾನೆ. ಅದು ಸುಗಂಧಳದ್ದೇ ಆಗಿದ್ದು ಬಹಳ ಅಚ್ಚರಿಯಾಗುತ್ತದೆ, ಆತ ಖ್ಯಾತ ಚಿತ್ರಕಲಾವಿದ ರವಿವರ್ಮ ಎಂದು ಗಾಡಿಯ ಚಾಲಕ ಹೇಳುತ್ತಾನೆ. ಅಷ್ಟರಲ್ಲಿ ರವಿವರ್ಮ ಅಲ್ಲಿಂದ ಕಣ್ಮರೆಯಾಗಿರುತ್ತಾನೆ. ಮತ್ತೊಂದು ದಿನ ರವಿವರ್ಮ ಕೋಣೆಯಿಂದ ನೋಡುತ್ತಿದ್ದಂತೆ ಸಾರೋಟಿನಿಂದ ಇಳಿದುಬಂದ ಸುಂದರಿಯನ್ನು ನೋಡುತ್ತಾ ನಿಲ್ಲುತ್ತಾನೆ. ಆಕೆ ಸುಗಂಧಳೇ ಆಗಿದ್ದು ತನ್ನ ಚಿತ್ರವನ್ನು ಹಿಂತಿರುಗಿಸಲು ಬಂದಿದ್ದಾಗಿ ಹೇಳುತ್ತಾಳೆ. ಪ್ರತಿಯಾಗಿ ಏನನ್ನೂ ಕೊಡದೆ ಪುಕ್ಕಟೆಯಾಗಿ ಏನನ್ನೂ ತೆಗೆದುಕೊಳ್ಳುವುದಿಲ್ಲ ಎಂದೂ ಹೇಳುತ್ತಾಳೆ. ಅಲ್ಲಿಂದ ಆಕೆಯನ್ನು ಸ್ಟುಡಿಯೋಗೆ ಕರೆದುಕೊಂಡು ಹೋಗುತ್ತಾನೆ. ಅಲ್ಲಿಯ ಚಿತ್ರಗಳನ್ನು ನೋಡಿ ದಿಗ್ಭ್ರಾಂತಳಾಗುತ್ತಾಳೆ ಸುಗಂಧ. ಮರುದಿನ ಗುಲಾಬಿ ಬಣ್ಣದ ಸೀರೆಯಲ್ಲಿ ಮತ್ತೆ ರವಿವರ್ಮನ ರೂಮಿಗೆ ಬರುತ್ತಾಳೆ. ಆ ಅಪ್ರತಿಮ ಸುಂದರಿಯನ್ನು ಕಂಡು ರವಿವರ್ಮನಿಗೂ ಖುಷಿಯಾಗುತ್ತದೆ.

ಅದಾಗಿ ಸುಗಂಧಳನ್ನು ನಗ್ನವಾಗಿ ಕೆಲಕಾಲ ನಿಲ್ಲಿಸಿ ಆಕೆಯ ನಗ್ನಚಿತ್ರವನ್ನು ರವಿವರ್ಮ ಬರೆಯುತ್ತಾನೆ. ಹಾಗೆಯೇ ನಿಲ್ಲಿಸಿದಾಗ ಆಕೆಗೆ ಅಸಾಧ್ಯ ಸಿಟ್ಟುಬರುತ್ತದೆ. ನೀನು ಕಾಮಕ್ಕಾಗಿ ನನ್ನನ್ನು ಹೀಗೆ ನಿಲ್ಲಿಸಿದ್ದಿ ಎಂದು ರೇಗುತ್ತಾಳೆ. ಅದೇ ಸನ್ನಿವೇಶಕ್ಕಾಗಿ ಕಾಯುತ್ತಿದ್ದ ರವಿವರ್ಮ ಇನ್ನು ನನ್ನ ಚಿತ್ರಬರೆಯುವ ವಸ್ತು ಸಿಕ್ಕಿತು ಎಂದು ಹೇಳುತ್ತಾನೆ. ಅಲ್ಲದೆ 'ಸುಗಂಧಾ, ಒಬ್ಬ ಕಲಾವಿದನಿಗೆ ತನ್ನ ಮುಂದಿರುವ ಸೌಂದರ್ಯ ಆರಾಧಿಸಲ್ಪಡುವ ವಸ್ತು. ಆ ದಿವ್ಯ ಸೌಂದರ್ಯವನ್ನು ನಾನು ಪೂಜಿಸುವೆನೇ ವಿನಃ ಬೇರಾವ ದೃಷ್ಟಿಯಿಂದಲು ನೋಡುವುದಿಲ್ಲ. ಹಾಗೆ ನೋಡಿದೆನಾದರೆ ನನಗೆ ಚಿತ್ರ ರಚಿಸಿಲೂ ಸಾಧ್ಯವಾಗುವುದಿಲ್ಲ. ನಿನ್ನ ನಗ್ನ ದೇಹವನ್ನು ನಾನು ನೋಡಿದ್ದು ಹಾಗೆಯೇ.' ಎನ್ನುತ್ತಾನೆ.

ತಲೆ ನೇವರಿಸಿದಳು. ನಾನು ಇದ್ದಂತೆಯೇ ಇದ್ದೆ, ಅದು ತಾಯಿ ಕರುಳಿನ ಕೂಗು ಅಷ್ಟೇ. ಆ ರಾತ್ರಿ ನಮ್ಮ ಮನೆಯಲ್ಲಿ ದೊಡ್ಡ ಸಮಾರಂಭ. ಒಂದು ಕಥಕ್ ನೃತ್ಯ ಪ್ರದರ್ಶನ ಏರ್ಪಡಿಸಲಾಗಿತ್ತು. ಸೋದರಮಾವ ಇದ್ದಕ್ಕಿದ್ದಂತೆ 'ರವಿವರ್ಮ, ನಿನ್ನ ಕಥಕ್ ನೃತ್ಯ ನೋಡಿ ತುಂಬಾ ದಿನಗಳಾಯಿತು. ಏಳು, ಗೆಜ್ಜೆ ಕಟ್ಟಿಕೋ, ಒಂದು ಮೀರಾ ಭಜನ್‌ಗೆ ನೃತ್ಯ ಮಾಡು' ಎಂದು ಆಜ್ಞಾಪಿಸಿಬಿಟ್ಟರು.

'ಅಭ್ಯಾಸವಿಲ್ಲವಲ್ಲ ಮಾಮಾ' ಎಂದೆ.

'ಎಷ್ಟು ವರ್ಷಗಳು ಕಳೆದರೂ ಚಿಕ್ಕಂದಿನಲ್ಲಿ ಕಲಿತ ವಿದ್ಯೆ ಮರೆಯುವುದಿಲ್ಲ. ನಿನ್ನ ಅಮ್ಮ ನಿನಗೆ ಭರತನಾಟ್ಯ, ಕಥಕ್, ಕಥಕಳಿ ಎಲ್ಲವನ್ನೂ ಕಲಿಸಿದ್ದಳಲ್ಲ, ಏಳು, ನಮಗೆ ನೋಡಬೇಕೆಂದೆನಿಸಿದೆ.' ಅವರ ಮಾತನ್ನು ಮೀರಲಾರದೆ ಮೇಲೆದ್ದೆ. ಕರಿಯ ಬಣ್ಣದ ರೇಷ್ಮೆ ಕುರ್ತಾ, ಪೈಜಾಮ ಧರಿಸಿ ಕಾಲಿಗೆ ಗೆಜ್ಜೆ ಕಟ್ಟಿ ಬಂದೆ. ಅನೇಕ ವರ್ಷಗಳ ಅಭ್ಯಾಸ ತಪ್ಪಿದ್ದರೂ, ಅಮ್ಮ ಹಾಡಿದ ಮೀರಾಭಜನ್‌ಗೆ ನನ್ನ ಕಾಲ್ಗಳು ಮೊದಲಿನಂತೆಯೇ ಹೆಜ್ಜೆ ಹಾಕತೊಡಗಿದವು. ನಾನು ನೃತ್ಯ ಪ್ರದರ್ಶನ ಮುಗಿಸಿದಾಗ ಭಾರೀ ಕರತಾಡನ! ಮಂಗಳಗಂತೂ ನಾನು ಹಿಂದೆ ನರ್ತಿಸುತ್ತಿದ್ದಂತೆಯೇ ನರ್ತಿಸಿದನೆಂದು ಬಹಳ ಖುಷಿ.

ಆ ಸಂಜೆ ನನ್ನ ಮಾವನ ಕೋಣೆಗೆ ಹೋದೆ. ಜೊತೆಯಲ್ಲಿ ನನ್ನೊಂದಿಗೆ ದಾಸಿಯರು ಒಂದು ಹರಿವಾಣ ತಂದಿದ್ದರು. ಧ್ಯಾನದಲ್ಲಿ ಕುಳಿತಿದ್ದ ಮಾವನಿಗೆ ನಮಸ್ಕರಿಸಿದೆ. 'ಮಾಮಾ ಇದರಲ್ಲಿ ಐದು ಸಾವಿರದೊಂದು ಬೆಳ್ಳಿ ನಾಣ್ಯಗಳ ಗುರುದಕ್ಷಿಣೆ ತಂದಿದ್ದೇನೆ. ನನ್ನ ವಿದ್ಯಾ ಸಾಫಲ್ಯಕ್ಕೆ ನೀವೇ ಸಂಪೂರ್ಣ ಕಾರಣ. ಆದ್ದರಿಂದ ಇದು ನನ್ನ ಅಲ್ಪ ಕೃತಜ್ಞತಾ ಕಾಣಿಕೆ. ನೀವು ಸ್ವೀಕರಿಸಿ ಆಶೀರ್ವದಿಸಬೇಕು' ಎಂದೆ.

'ನಿನ್ನ ವಿಶ್ವಾಸ ಕಂಡು ನನಗೆ ಸಂತಸವಾಗುತ್ತಿದೆ ಕೊಚ್ಚ್. ಖಂಡಿತಾ ಸ್ವೀಕರಿಸುತ್ತೇನೆ. ದೇವಿ ಭಗವತಿಗೆ ಒಂದು ಬೆಳ್ಳಿಯ ಕಿರೀಟ ಮಾಡಿಸಬೇಕೆಂದು ಬಹಳ ದಿನಗಳ ಆಸೆ. ನನಗೀಗ ಸಂಪಾದನೆಯೇನೂ ಇಲ್ಲವಲ್ಲ. ಹಾಗಾಗಿ ಈ ನಾಣ್ಯಗಳನ್ನೇ ಉಪಯೋಗಿಸಿ ಮಾಡಿಸುತ್ತೇನೆ' ಎನ್ನುತ್ತಾ ಆಶೀರ್ವದಿಸಿದರು.

ಮತ್ತೊಂದು ತಟ್ಟೆಯಲ್ಲಿ ತಂದ ಸಂಭಾವನೆಯನ್ನು ಪಾಚನ್‌ಗೆ ಕೊಟ್ಟಾಗ ಅವನು ಬೆಚ್ಚಿಬಿದ್ದ. 'ಇದೇನು ಕೊಚ್ಚ್ ಹೀಗೆ ಮಾಡಿದೆ?' ಎಂದು ಕೇಳಿದ ಪಾಚನ್.

'ಪಾಚನ್, ಆ ದಿನ ನಾನು ಗೋಡೆಯ ಮೇಲೆ ಗೀಚಿದ್ದನ್ನು ನೀನು ಮಾವನಿಗೆ ನನ್ನ ವಿರುದ್ಧ ದೂರು ಹೇಳದೆ ಹೋಗಿದ್ದರೆ, ಮಾವನಿಗೆ ನನ್ನ ಕಲೆಯ ಅರಿವಾಗುತ್ತಿತ್ತೇ? ಅವರು ನನ್ನನ್ನು ಪ್ರೋತ್ಸಾಹಿಸುತ್ತಿದ್ದರೇ? ಮೂಲ ಕಾರಣ ನೀನೇ ತಾನೆ? ಅದಕ್ಕೆ ಈ ಕೃತಜ್ಞತಾ ದಕ್ಷಿಣೆ' ಎಂದು ನಮಿಸಿದೆ.

'ಇಷ್ಟು ದಿನ ಇಲ್ಲಿದ್ದೂ ಮಾವೆಲ್ಲಿಕರಾಗೆ ಹೋಗುವುದಿಲ್ಲವೆ ಕೊಚ್ಚ್? ನಿನ್ನ ಹೆಂಡತಿ ಮಕ್ಕಳು ನಿನಗಾಗಿ ಕಾಯುತ್ತಿರುವರಲ್ಲವೆ?'

'ಹೌದು, ಹೋಗಬೇಕು, ಸರಸ್ವತಿ ಹುಟ್ಟಿದ ಮೇಲೆ ನಾನು ಅವಳೊಂದಿಗೆ ಹೆಚ್ಚು ಸಮಯ ಕಳೆದೇ ಇಲ್ಲ. ನಾಳೆಯೇ ಹೊರಡುತ್ತೇನಮ್ಮ' ಎಂದು ಹೇಳಿ ನನ್ನ ಅರ್ಧ ರಚಿಸಿದ ಚಿತ್ರಪಟಗಳನ್ನು ಗಂಟು ಕಟ್ಟಿಕೊಂಡೆ.

ಮಾವೇಲ್ಲಿಕರಾದ ಅರಮನೆಯಲ್ಲಿ ಪುರತಾರ್ಥಿಯ ಸ್ವಾಗತ ಸಾಧಾರಣವಾಗಿತ್ತು. ಕಿಳಿಮಾನೂರಿಗೆ ಬಂದು ಎರಡು ತಿಂಗಳ ನಂತರ ಅಲ್ಲಿಗೆ ಬಂದೆನೆಂಬ ಕೋಪ ಪ್ರಕಟಿಸಿದಳು. ಸೋದರಮಾವನ ಅನಾರೋಗ್ಯದ ನೆವವೊಡ್ಡಿದೆ. ಮಕ್ಕಳಿಗಂತೂ ನನ್ನನ್ನು ಕಂಡು ಅಸಾಧ್ಯ ಖುಷಿ. ನನ್ನ ಹಿಂದೆಮುಂದೆ ಸುತ್ತುತ್ತಿದ್ದರು. ನಾನು ಬೊಂಬಾಯಿನಿಂದ ತಂದಿದ್ದ ಉಡುಗೊರೆಗಳನ್ನು ಕಂಡು ಆನಂದಿಸಿದರು. ಅವರ ಸಂತೋಷ ಕಂಡು ನಾನೂ ಹಿಗ್ಗಿದೆ. ರಾಮವರ್ಮ ಕೇರಳವರ್ಮ ಚೆನ್ನಾಗಿ ಬೆಳೆದಿದ್ದರು. ವಿದ್ಯಾವಂತರಾಗುತ್ತಿದ್ದರು. ಸರಸ್ವತಿ ಸಂಗೀತ ನೃತ್ಯಗಳನ್ನು ಕಲಿಯುತ್ತಿದ್ದಳು. ಆ ರಾತ್ರಿ ಪುರು ನನ್ನ ಕೋಣೆಗೆ ಬಂದಾಗ, ಬಹುದಿನಗಳಿಂದ ನನ್ನ ತೋಳ್ಗಳಲ್ಲಿರದುದಕ್ಕಾಗಿ ಕಣ್ಣೀರಿಟ್ಟಳು.

'ನನಗೆ ಬೇಕಾದದ್ದು ಇದೊಂದೇ. ಇದಕ್ಕಾಗಿ ಅದೆಷ್ಟು ದಿನ ನನ್ನನ್ನು ಕಾಯಸಿಬಿಟ್ಟೆರಿ' ಎಂದು ಅತ್ತಳು.

'ಸಂತೋಷದ ಸಮಯದಲ್ಲಿ ಇದೆಂತಹ ಕಣ್ಣೀರು. ಎಲ್ಲಿ ಸ್ವಲ್ಪ ನಗು. ನಿನ್ನ ನಗೆಮೊಗ ನೋಡಿ ಅದೆಷ್ಟು ದಿನವಾಯಿತು' ಎನ್ನುತ್ತಾ ಅವಳನ್ನು ರಮಿಸಿದೆ. ಇಬ್ಬರಿಗೂ ಅನೇಕ ದಿನಗಳ ನಂತರದ ಸಮಾಗಮ ತೃಪ್ತಿಯನ್ನು ನೀಡಿತ್ತು. 'ಹೀಗೇ ನಿಮ್ಮೊಂದಿಗೆ ಯಾವಾಗಲೂ ಇರುವ ಬಯಕೆ' ಎಂದಳು. 'ನೀನು ಮಕ್ಕಳೊಂದಿಗೆ ಕಿಳಿಮಾನೂರಿಗೆ ಬಂದುಬಿಡು. ಈ ಹಳೆಯ ಮಾತೃಪ್ರಧಾನ ಸಂಪ್ರದಾಯಗಳನ್ನೆಲ್ಲಾ ಮುರಿದುಹಾಕು; ಒಟ್ಟಾಗಿರೋಣ' ಎಂದೆ.

ಪುರತಾರ್ಥಿ ಒಂದು ವಿಶಾಲವಾದ ಗಾಳಿ ಬೆಳಕಿದ್ದ 'ಉಲ್ಲಾಸ ಮಡೋಹಂ' ಎಂಬ ಸ್ಥಳವನ್ನು ನನ್ನ ಚಿತ್ರರಚನೆಗಾಗಿ ಅಣಿ ಮಾಡಿದ್ದಳು. ನನ್ನ ಅರ್ಧರಚಿತ ಚಿತ್ರಪಟಗಳನ್ನು ಅಲ್ಲಿ ಸಾಗಿಸಿ ಅಣಿಗೊಳಿಸಿದೆ. ಅಂತೆಯೇ ಮರುದಿನ ಚಿತ್ರ ರಚನೆಯಲ್ಲಿ ತೊಡಗಿದೆ. ಒಂದು ದಿನ ಪುರು ನಾನು ಚಿತ್ರ ರಚಿಸುತ್ತಿರುವಾಗ ಬಂದಳು. ಅಲ್ಲಿದ್ದ ತೈಲಚಿತ್ರಪಟಗಳನ್ನೆಲ್ಲಾ ಕೂಲಂಕುಷವಾಗಿ ನೋಡಿದಳು. ಹಂಸದಮಯಂತಿ ಚಿತ್ರದ ಮುಂದೆ ತುಂಬಾ ಹೊತ್ತು ನಿಂತಿದ್ದಳು. ನಂತರ ನನ್ನ ಕಡೆ ತಿರುಗಿ ಕೇಳಿದಳು. 'ದಮಯಂತಿ, ಮೇನಕೆ, ದ್ರೌಪದಿ, ಸೈರಂಧ್ರಿ ಇವರೆಲ್ಲರೂ ಒಬ್ಬಳೇ ಅಲ್ಲವೆ?'. 'ಹೌದು' ಎಂದೆ. 'ಈ ಅಸಾಧಾರಣ ರೂಪವತಿಯನ್ನು ನೀವು ನೋಡಿ ಚಿತ್ರಿಸಿರಬೇಕಲ್ಲವೆ?' 'ಹೌದು, ಸುಗಂಧ ಎಂಬಾಕೆ. ಅವಳ ತಂಗಿ ಕಮಲ ಇಬ್ಬರೂ ನನಗೆ ಬೊಂಬಾಯಿಯಲ್ಲಿ ರೂಪದರ್ಶಿಗಳಾಗಿದ್ದರು.' 'ಅವಳ ಕಣ್ಗಳಲ್ಲಿರುವ ಭಾವ ತುಂಬಾ ಕಥೆಗಳನ್ನು ಹೇಳುತ್ತಿವೆ. ನಿಮಗವಳು ತುಂಬಾ ಹತ್ತಿರದವಳಾಗಿರಬೇಕಲ್ಲವೆ?'

ಸುಳ್ಳು ಹೇಳುವುದೇನೂ ನನಗೆ ಕಷ್ಟಕರವಾಗಿರಲಿಲ್ಲ. ನಿಜವನ್ನು ನಾನು ಖಂಡಿತ ಮರೆಮಾಚಬಹುದಾಗಿತ್ತು. ಆದರೆ ನನಗೆ ಹಾಗೆ ಮಾಡಬೇಕೆಂದೆನಿಸಲಿಲ್ಲ. 'ಹಲವೊಮ್ಮೆ